# ರಿವೆರೆಸಿಬಲ್ ಪಿನಫ್ರೋರ್ ಡ್ರೆಸ್

**ಈ ವೀಡಿಯೋದಲ್ಲಿ ರೆವೆರ್ಸಿಬಲ್ ಪಿನಫ್ರೋರ್ ಡ್ರೆಸನ್ನು ಹೊಲೆಯುವುದನ್ನು ನೀವು ಕಲೆಯುತ್ತೀರ.**





## ವಸ್ತುಗಳ ವಿವರ

ಪ್ಲೇನ್ ಅಥವಾ ಪ್ರಿಂಟಿರುವ ಎರಡು ಬಟ್ಟೆ ಪ್ರಿಂಟಿರುವ 45 ಇಂಚಿನ 1 ಮೀಟರ್ ಬಟ್ಟೆ
www.ushasew.com ವೆಬ್ ಸೈಟ್ ನಿಂದ ಡೌನ್ಲೋಡ್ ಮಾಡಿಕೊಂಡಿರುವ ರೆವೆರ್ಸಿಬಲ್ ಪಿನಫ್ರೋರ್ ಡ್ರೆಸ್ಸಿನ ಟೆಂಪ್ಲೇಟ
ವಾಟರ್ ಎರೇಸಬಲ್ ಮಾರ್ಕರ್
ಕತ್ತರಿ
ಬಟ್ಟೆಗೆ ಹೊಂದುವಂತ ದಾರ
ಪಿನ್



ಟೆಂಪ್ಲೇಟಿನಲ್ಲಿ ತೋರಿಸಿರುವಂತೆ ಬಟ್ಟೆಯನ್ನು ಕತ್ತರಿಸಿಕೊಳ್ಳಬೇಕು.ಹೊರಗಿನ ಮತ್ತು ಒಳಗಿನ ಪಟ್ಟೆಯ ಪೀಸಸ್ನನ್ನು ಜೋಡಿಸಿಕೊಂಡು ಮಾರ್ಕ್ ಮಾಡಿರುವುದರ ಮೇಲೆ ಹೊಲೆಯಬೇಕು. ನಂತರ ಹಿಂಭಾಗದ ವಿನ್ಯಾಸ ಮಾಡುವುದು ಇದಕ್ಕೆ ಹಿಂಬದಿಯ ಪ್ಯಾಟರ್ನ್ ನ ವಿರುದ್ಧ ಅಂಚನ್ನು ಜೋಡಿಸಿ ಭುಜದ ಭಾಗವನ್ನು ಹೊಲೆಯುವುದು.



## ಹಂತ 1 : ಟೆಂಪ್ಲೇಟಿನಲ್ಲಿರುವಂತೆ ಮಾರ್ಕ್ ಮಾಡಿ ಕಟ್ ಮಾಡುವುದು

ಯಾವುದಾದರೂ ಅಂದವಾದ ಒಳ್ಳೆ ಚಿತ್ರವಿರುವ ಬಟ್ಟೆಯನ್ನು ತೆಗೆದುಕೊಳ್ಳಿ, ನಾವು ಈ ರೀತಿಯ ಚಿತ್ರವಿರುವ ಬಟ್ಟೆಯನ್ನು ತೆಗೆದುಕೊಂಡಿದ್ದೇವೆ. ಇದನ್ನು ಇಲ್ಲಿ ತೋರಿಸಿರುವಂತೆ ಅರ್ಧಕ್ಕೆ ಮಡಚಿ. ಈ ವೀಡಿಯೋಗಾಗಿ ನಾವು ಇದನ್ನು ಬಲಗಡೆ ಮತ್ತು ಇದನ್ನು ಹಿಂಭಾಗವೆಂದು ಅಂದುಕೊಳೋಣ. ಈಗ ರಿವೆರೆಸಿಬಲ್ ಪಿನಫ್ರೋರ್ ಡ್ರೆಸ್ ನ್ ಟೆಂಪ್ಲೇಟನ್ನು ಬಟ್ಟೆಯ ಹಿಂಬದಿಯಲ್ಲಿ ಇಡೋಣ. ಈ ಟೆಂಪ್ಲೇಟ್ 4 –5 ವರ್ಷದ ಹುಡುಗಿಯದ್ದಾಗಿರುತ್ತದೆ.





ಬಟ್ಟೆಯನ್ನು ಮಡಚುವಾಗ ಟೆಂಪ್ಲೇಟಿನ ಫ್ರೋಲ್ಡ್ ಭಾಗವು ಬಟ್ಟೆಯ ಮಡಚಿರಿವ ಭಾಗದ ಮೇಲೆ ಇಡಬೇಕು. ಟೆಂಪ್ಲೇಟಿನಲ್ಲಿ ಸೂಚಿಸಿರುವಂತೆ ಇದು ಹಿಂಭಾಗ ಮತ್ತು ಇದು ಮುಂಭಾಗ. ಪಿನ್ನಿನ ಸಹಾಯದಿಂದ ಬಟ್ಟೆಯನ್ನು ಭದ್ರವಾಗಿ ಪಿನ್ ಮಾಡಿ.ಬಟ್ಟೆಯ ಎರಡೂ ಪದರಕ್ಕೆ ಪಿನ್ ಹಾಕಿದೆಯಾ ಎಂದು ಖಾತ್ರಿಪಡಿಸಿಕೊಳ್ಳಿ, ಇದು ಮಾರ್ಕ್ ಮಾಡುವಾಗ ಬಟ್ಟೆಯನ್ನು ಭದ್ರಗೊಳಿಸುತ್ತದೆ.ಈಗ ಮಾರ್ಕರ್ ತೆಗೆದುಕೊಂಡು ಟೆಂಪ್ಲೇಟಿನಲ್ಲಿರುವಂತೆ ಮಾರ್ಕ್ ಮಾಡಿ.ಇದಾದ ಮೇಲೆ ಪಿನ್ನಳನ್ನು ತೆಗೆದು ಮಾರ್ಕ್ ಮಾಡಿರುವುದರ ಮೇಲೆ ಕತ್ತರಿಯ ಸಹಾಯದಿಂದ ಕಟ್ ಮಾಡಿ.ಕಟ್ ಮಾಡಿರುವ ಬಟ್ಟೆ ಹೀಗೆ ಕಾಣಬೇಕು.ಈಗ ಇನ್ನೊಂದು ರಿವೆರೆಸಿಬಲ್ ಬಟ್ಟೆಯನ್ನು ಹೊಲೆಯೋಣ




ನಿಜವಾದ ಬಟ್ಟೆಯನ್ನು ಹೋಲುವಂತಹ ಇನ್ನೊಂದು ಬಟ್ಟೆಯನ್ನು ತೆಗೆದುಕೊಂಡು ಅರ್ಧಕ್ಕೆ ಮಡಚಿ.ಬಟ್ಟೆಯ ಹಿಂಭಾಗದಲ್ಲಿ ಕೆಲಸ ಮಾಡೋಣ. ನೆನಪಿರಲಿ ಇದು ಬಟ್ಟೆಯ ಹಿಂಭಾಗ ಮತ್ತು ಇದು ಮುಂಭಾಗ.ನಾವು ಟೆಂಪ್ಲೇಟನ್ನು ಈ ಬಟ್ಟೆಯ ಮೇಲೂ ಇಟ್ಟು ಮಾರ್ಕ್ ಮಾಡೋಣ.ಅದೇ ವಿಧಾನವನ್ನು ಅನುಸರಿಸಿ, ಟೆಂಪ್ಲೇಟನ್ನು ಇಟ್ಟು ಮಾರ್ಕ್ ಮಾಡಿ ಕತ್ತರಿಸಿ













## ಹಂತ 2 : ಎರಡೂ ಬಟ್ಟೆಯನ್ನು ಜೋಡಿಸೋಣ

ಎರಡೂ ಬಟ್ಟೆಯನ್ನು ಒಂದರ ಮೇಲೊಂದನ್ನು ಇಡಿ. ಬಲಭಾಗ ಬಲಭಾಗವನ್ನು ನೋಡುವಂತೆ ಇಟ್ಟು ಪಿನ್ ಮಾಡಿ.ಈಗ ಪಿನ್ ಮಡಿರುವ ಬಟ್ಟೆಯನ್ನು ಊಷಾ ಜನೋಮ್ ಹತ್ತಿರ ತೆಗೆದುಕೊಂಡು ಹೋಗೋಣ.ಪ್ರೆಸ್ಸರ್ ಫುಟ್ ಗೆ ಭುಜ ಭಾಗದ ಕೊನೆಯನ್ನು ಹೊಂದಿಸಿ. ಪ್ಯಾಟರ್ನ್ ಸೆಲೆಕ್ಟರ್ ಡಯಲನ್ನು A ಗೆ ಇಡಿ ಮತ್ತು ನೇರ ಹೊಲಿಗೆಗೆ ಹೊಲಿಗೆಯ ಉದ್ದ 2.5 ಗೆ ಇಡಬೇಕು. ಹೊಲೆಯಲು ಪ್ರಾರಂಭಿಸಿ ಮತ್ತು ಸ್ವಲ್ಪ ಹೊಲೆದ ನಂತರ ರಿವರ್ಸ್ ಹೊಲಿಗೆ ಹಾಕಲು ಮರೆಯಬೇಡಿ ಇದು ಹೊಲಿಗೆಯನ್ನು ಭದ್ರಗೊಳಿಸುತ್ತದ.ಇನ್ನೊಂದು ತೋಳಿನ ವರೆಗೂ ಹೀಗೆ ಹೊಲೆಯುತ್ತಾ ಬನ್ನಿ ಹಾಗೆ ಹೊಲೆಯುತ್ತಾ ಪಿನ್ ಗಳನ್ನು ತೆಗೆಯಿರಿ.ಕೊನೆಯನ್ನು ತಲುಪಿದಾಗ ರಿವರ್ಸ್ ಹೊಲಿಗೆ ಮರಿಯದೇ ಹಾಕಿ. ಈಗ ಕೈ ಭಾಗವನ್ನು ಹೊಲೆಯೋಣ.ಈಗ ಸಧ್ಯಕ್ಕೆ ಭುಜದ ಭಾಗವನ್ನು ಹಾಗೆ ಬಿಡೋಣ.ಹೊಲಿಗೆಯನ್ನು ಮುಂದುವರಿಸುತ್ತಾ ಇನ್ನೊಂದು ಕೊನೆಯವರೆಗೂ ಹೊಲೆಯೋಣ. ಪಿನ್ ಗಳನ್ನು ಜಾಗ್ರತೆಯಿಂದ ತೆಗೆಯಿರಿ.ಮೊದಲಿನಂತೆ ಭುಜದ ಭಗವನ್ನು ಬಿಟ್ಟು ಹೊಲೆಯಿರಿ.ಕತ್ತಿನ ಭಾಗವನ್ನು ಹೊಲೆಯೋಣ.ಎಲ್ಲಾ ಕಡೆನೂ ಹೊಲೆದು ಅಂತ್ಯದಲ್ಲಿ ರಿವರ್ಸ್ ಹೊಲಿಗೆ ಹಾಕಿ. ಇನ್ನೊಂದು ಭಾಗ ಬಾಕಿ ಇದೆ.ಇದರಲ್ಲೂ ಭುಜದ ಭಾಗವನ್ನು ಬಿಟ್ಟು ಹೊಲೆಯಿರಿ. ತುದಿಯವರೆಗೂ ಹೊಲೆದು ಅಂತ್ಯದಲ್ಲಿ ರಿವರ್ಸ್ ಹೊಲಿಗೆ ಹಾಕಿ. ಹೆಚ್ಚಾಗಿರುವ ದಾರಗಳನ್ನು ಕತ್ತರಿಸಿ. ಈಗ ನಾವು ಯಾವುದೇ ಭುಜದ ಭಾಗವನ್ನು ಹೊಲೆದಿಲ್ಲಾ ಆದರೆ ಕತ್ತಿನ ಭಾಗ, ಕೈ ಭಾಗ ಮತ್ತು ಬಟ್ಟೆಯ ಅಂಚನ್ನು ಹೊಲೆದಿದ್ದೇವೆ.



ನಾವೀಗ ಬಟ್ಟೆಯ ಮೇಲೆ ಸ್ಲಾಶಸ್ ಸೃಷ್ಟಿಸಬೇಕು. ಬಾಟಮಯಿಂದ ಶುರುಮಾಡಿ. ಸೈಡ್ ಸೀಮನ್ನು ಕತ್ತರಿಸದಂತೆ ನೋಡಿಕೊಳ್ಳಿ, ಬಾಟಮ್ ಆದ ನಂತರ ಕೈ ಭಾಗ ಮತ್ತು ಕತ್ತಿನ ಭಾಗದಲ್ಲೂ ಹೀಗೆ ಮಾಡೋಣ. ಈ ನಾಚಸ್ ಸರ್ಕ್ಯುಲರ್ ಸೀಮನ್ನು ಫ್ಲಾಟ್ ಮಾಡಲು ಸಹಾಯಮಾಡುತ್ತದೆ. ಇದರಿಂದ ನಿಮ್ಮ ಹುಡುಗಿ ಹಾಕಿಕೊಂಡಾಗ ಬಟ್ಟೆ ಭದ್ರವಾಗಿ ನಿಲ್ಲುತ್ತದೆ.






ಈಗ ಹೊಲೆಯದೆ ಇರುವ ಒಂದು ಭುಜದ ಭಾಗವನ್ನು ತೆಗೆದುಕೊಂಡು ಒಳಗಿನಿಂದ ಹೊರಕ್ಕೆ ವೀಡಿಯೋದಲ್ಲಿ ತೋರಿಸಿರುವಂತೆ ತಿರುಗಿಸಿ. ನಿಧಾನವಾಗಿ ಮಾಡಿ ಏಕೆಂದರೆ ಹಾಕಿರುವ ಹೊಲಿಗೆ ಬಿಚ್ಚಬಾರದು.ಎಲ್ಲಾ ಅಂಚನ್ನು ಸರಿಪಡಿಸಿ ನೇರ ಮಾಡಿ.






ಸೀಮ್ ಲೈನ್ ತಿರುಗದೆ ನೇರವಾಗಿರಲು ಅದನ್ನು ಇರನ್ ಮಾಡಬೇಕು. ಹೊಲೆಯುತ್ತಾ ಅದನ್ನು ಹೊಂದಿಸಿಕೊಳ್ಳಿ, ನೀವು ಐರನ್ ಮಾಡಿರುವ ಕಡೆ ಮತ್ತು ಮಾಡದೆ ಇರುವ ಕಡೆಯ ವ್ಯತ್ಯಾಸವನ್ನು ಈಗಾಗಲೆ ಕಾಣಬಹುದು.










## ಹಂತ 3 – ಡ್ರೆಸ್ಸಿನ ಹಿಂಭಾಗವನ್ನು ಹೊಲೆಯುವುದು

ಈಗ ಮುಂಭಾಗದ ತೆರೆದಿರುವ ಭುಜದ ಭಾಗವನ್ನು ತೆಗೆದುಕೊಂಡು ಹಿಂಭಾಗಕ್ಕೆ ತನ್ನಿ.ವೀಡಿಯೋದಲ್ಲಿ ತೋರಿಸಿರುವಂತೆ ಮುಂಭಾಗದ ಭುಜದ ಬಟ್ಟೆಯನ್ನು ಕಾಲು ಇಂಚು ಒಳಕ್ಕೆ ಮಡಚಿ. ಎಚ್ಚರದಿಂದ ಹೊಲೆಯಿರಿ. ಮುಂಭಾಗ ಮಡಚಿದ ಮೇಲೆ ಹಿಂಭಾದ ಭುಜದ ಭಾಗವನ್ನು ಇದಕ್ಕೆ ಸೇರಿಸಿ ಪಿನ್ ಮಾಡಿ. ಇದೇ ಕ್ರಮವನ್ನು ಇನ್ನೊಂದು ಕಡೆನೂ ಮಾಡೋಣ. ಹಿಂಭಾಗದ ಭುಜದ ಬಟ್ಟೆಯನ್ನು ಮುಂಭಾಗದ ಭುಜದ ಬಟ್ಟೆಯ ಹತ್ತಿರದಲ್ಲಿಟ್ಟು ಮುಂಭಾಗದ ಭುಜದ ಬಟ್ಟೆಯನ್ನು ಕಾಲು ಇಂಚು ಒಳಕ್ಕೆ ಮಡಚಿ . ಇದನ್ನು ನೀಟಾಗಿ ಮಾಡಿ  ನಂತರ ಹಿಂಭಾಗದ ಭುಜದ ಭಾಗವನ್ನು ಒಳಕ್ಕೆ ಹಾಕಿ ಪಿನ್ ಮಾಡಿ.



ನಮ್ಮ ಸುಂದರವಾದ ರಿವರ್ಸಿಬಲ್ ಪಿನಫ್ರೋರ್ ಡ್ರೆಸ್ ಮುಕ್ಕಾಲು ಭಾಗ ಸಿದ್ದವಾಗಿದ್ದೆ. ಈಗ ಪಿನ್ ಮಾಡಿರುವ ಭುಜದ ಭಾಗವನ್ನು ಹೊಲೆಯೋಣ. ಪ್ರೆಸ್ಸರ್ ಫುಟ್ಟಿಗೆ ಭುಜದ ಬಟ್ಟೆಯ ಒಂದು ಅಂಚನ್ನಿಟ್ಟು ಹೊಲೆಯಿರಿ. ಹೊಲೆಯುತ್ತಾ ಪಿನ್ಗಳನ್ನು ತೆಗೆಯಿರಿ ರಿವರ್ಸ್ ಹೊಲಿಗೆಯನ್ನೂ ಹಾಕಿ. ಇದು ತ್ಟಾ ಮುಖ್ಯ. ಇದೇ ವಿಧಾನವನ್ನು ಇನೊಂದು ಕಡೆನೂ ಅನುಸರಿಸಿ. ನಮ್ಮ ಡ್ರೆಸ್ ಈಗ ಸಿದ್ದವಾಗಿದೆ. ಇದು ಮುಂಭಾಗ ಮತ್ತು ಇದು ಹಿಂಭಾಗ. ನೀವು ಇದನ್ನು ತಿರುಗಿಸಿಕೂಡ ಹಾಕಿಕೊಳ್ಳಬಹುದು. ನಾವು ಕೈ ಭಾಗ, ಕತ್ತಿನ ಭಾಗ ಮತ್ತು ಭುಜದ ಭಾಗವನ್ನು ಹೊಲೆದಿದ್ದೇವೆ.



ಎಷ್ಟು ಮುದ್ದಾಗಿದೆ ಅಲ್ವಾ! ಈ ರಿವರ್ಸಿಬಲ್ ಪಿನಫ್ರೋರ್ ಡ್ರೆಸಲ್ಲಿ ನಿಮ್ಮ ಮಗಳು ಇದಕ್ಕಿಂತ ಮುದ್ದಾಗಿ ಕಾಣುತ್ತಾಳೆ. ಇದು ಎರಡು ಡ್ರೆಸ್ಸಿನಂತೆ ಉಪಯೋಗಿಸಬಹುದು. ನೀವು ಬೇರೆ ಬೇರೆ ರೀತಿಯ ಬಟ್ಟೆಯಿಂದ ವಿಧವಿಧವಾಗಿ ಹೊಲೆಯಬಹುದು.